# ಮಳೆರಾಯನಿಗೆ ಪ್ರಾರ್ಥನೆ

ಮುನಿಸು ಬೇಡ
ಮಳೆರಾಯ
ನೆನೆದರೆ ಸಾಕು
ಭಯ ಭಯ...

ಇಳೆ ತಂಪಾಗಲು
ಸ್ವಲ್ಪ ಸುರಿ
ಹೆಚ್ಚಾದರದು
ಕಿರಿಕಿರಿ...

ನದಿ ಕೆರೆಕೊಳಗಳ
ಆವೇಶ
ಬೆಳೆಗಳ ಪಾಲಿಗೆ
ಯಮಪಾಶ

ಆರ್ಭಟ ನಿಲ್ಲಿಸು
ಕರಿಮೋಡ
ಮೊರೆಯಿಡುತಿದೆ ನೆಲ
ಕಾಡ ಬೇಡ...

ಮನ್ನಿಸಿ ನಿಲ್ಲಿಸು
ವರ್ಷದ ಧಾರೆ
ಬಿಸಿಲಿನ ಸ್ನೇಹಕೆ
ಬಯಸಿದೆ ಧರೆ!

■ **ಕೆ.ವಿ. ರಾಜಲಕ್ಷ್ಮಿ**



ವಿಜಯಕುಮಾರಿ

# ಕೆಲಸದಲ್ಲಿ ಶ್ರದ್ಧೆ!



'ನಾನು ಲಂಡನ್ನಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಬಂದಿದ್ದೇನೆ. ಐ.ಸಿ.ಎಸ್ ಪಾಸಾಗಿದೆ. ಸೇವೆಗೆ ಸೇರುವ ಮೊದಲು ನಿಮ್ಮೊಂದಿಗೆ ಒಂದೆರಡು ದಿನವಿದ್ದು ಹೋಗಬೇಕೆಂದಿರುವೆ ಆಗಬಹುದೇ?' ಎಂದು ಯುವಕನೊಬ್ಬ ಮಹಾತ್ಮ ಗಾಂಧೀಜಿಯವರನ್ನು ಕೇಳಿದ. ಗಾಂಧಿ ಅದಕ್ಕೆ ಒಪ್ಪಿಗೆಯನ್ನು ನೀಡಿದರು.

ಮಹಾತ್ಮಜಿಯವರು ಆ ಯುವಕನನ್ನು ಅಪಾದಮಸ್ತಕ ನೋಡಿದರು. ಆಗ ಸಬರಮತಿ ಆಶ್ರಮದಲ್ಲಿ ತಂಗಲು ಶುಲ್ಕ ಕೊಡಬೇಕಿರಲಿಲ್ಲ. ಆದರೆ, ಅಲ್ಲಿ ಯಾವುದಾದರೂ ಸೇವೆಯನ್ನು ನಿರ್ವಹಿಸಬೇಕಿತ್ತು.

ಮರುದಿನ ಯುವಕನಿಗೆ 'ನೀವು ಬಚ್ಚಲು ಮನೆ ಸ್ವಚ್ಛಗೊಳಿಸಿರಿ' ಎಂದು ಸೂಚಿಸಲಾಯಿತು. ಯುವಕನಿಗೆ ಕೋಪ ಬಂತು. ಇದೆಂಥ ಉದ್ಧಟತನ! ಇಂಗ್ಲೆಂಡಿನಲ್ಲಿ ಓದಿ, ಐ.ಸಿ.ಎಸ್. ಪಾಸಾಗಿರುವ ನನಗೆ ಬಚ್ಚಲು ಮನೆ ಸ್ವಚ್ಛಗೊಳಿಸಲು ಹೇಳುವುದೆಂದರೇನು? ಎಂದು ಯೋಚಿಸಿದ.

ಗಾಂಧೀಜಿ ಬಳಿ ಬಂದು 'ನನಗೆ ಯಾವುದಾದರೂ ದೊಡ್ಡ ಕೆಲಸ ಕೊಟ್ಟಿದ್ದರೆ ನಿರ್ವಹಿಸುತ್ತಿದ್ದೆ. ಇಂಥ ಸಣ್ಣ ಕೆಲಸ ಕೊಡುವುದೆಂದರೆ ನನಗೂ ಮತ್ತು ನನ್ನ ಓದಿಗೂ ಅವಮಾನಿಸಿದಂತೆ' ಎಂದು ದೂರಿದನು.

ಗಾಂಧೀಜಿ 'ನೋಡು, ಇಂಥ ಸಣ್ಣ ಪುಟ್ಟ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸು. ಮುಂದೆ ನಿನಗೆ ದೊಡ್ಡ ಕೆಲಸ ಸಿಕ್ಕಾಗ ಅದನ್ನೂ ಅಚ್ಚುಕಟ್ಟಾಗಿ ನಿರ್ವಹಿಸಬಹುದು. ನಿನಗೆ ಮಾಡಲು ಸಾಧ್ಯವಿದೆ ಪ್ರಯತ್ನಿಸು. ಒಂದು ವೇಳೆ ನಿನಗೆ ಸಾಧ್ಯವಾಗದಿದ್ದರೆ ನನಗೆ ಬಂದು ಹೇಳು. ನನ್ನ ಕೆಲಸದ ಜೊತೆಗೆ, ನಿನಗೂ ನೆರವಾಗುವೆ' ಎಂದರು.

ಯುವಕನಿಗೆ ಆ ಮಾತು ಕೇಳಿ ನಾಚಿಕೆ ಆಯಿತು. ಗಾಂಧಿಯವರೇ ಆ ಕೆಲಸ ಮಾಡಲು ಸಿದ್ಧರಿರುವಾಗ ತಾನೇಕೆ ಮಾಡಬಾರದು ಎಂದು ಕೆಲಸದಲ್ಲಿ ತೊಡಗಿದ. ಅನಂತರ ಗಾಂಧೀಜಿಯವರ ಮೆಚ್ಚುಗೆಯನ್ನೂ ಗಳಿಸಿ ಆಶ್ರಮದಿಂದ ತೆರಳಿದ.

ಮುಂದೆ ಆ ಯುವಕ ರಿಸರ್ವ್ ಬ್ಯಾಂಕಿನ ಅಧ್ಯಕ್ಷ ಪದವಿ ಗಳಿಸಿದ ಮೊದಲ ಭಾರತೀಯರಾದರು. ಅಷ್ಟೇ ಅಲ್ಲ, ನೆಹರೂ ಅವರ ಸಂಪುಟದಲ್ಲಿ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದರು. ಅನಂತರ ಅವರಿಗೆ 1975ರಲ್ಲಿ ಪ್ರತಿಷ್ಠಿತ ಪದ್ಮ ವಿಭೂಷಣ ಪ್ರಶಸ್ತಿ ನೀಡಲಾಯಿತು. ಮುಂದೆ ಅವರ ಪತ್ನಿಯೂ ಪದ್ಮ ವಿಭೂಷಣ ಪ್ರಶಸ್ತಿಗೆ ಪಾತ್ರರಾದರು. ಪತಿ–ಪತ್ನಿಯರಿಬ್ಬರೂ ಈ ಪ್ರಶಸ್ತಿ ಪಡೆದುದು ದಾಖಲೆಯೇ ಸರಿ.

ಅಂದು ಸಬರಮತಿ ಆಶ್ರಮದಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಶ್ರದ್ಧೆಯಿಂದ ನಿರ್ವಸಿದ್ದರಿಂದ ಮುಂದೆ ಇಂಥ ಮಹೋನ್ನತ ಸಾಧನೆ ಮಾಡಲು ಅವರಿಗೆ ಸಾಧ್ಯವಾಯಿತು.

ಮಕ್ಕಳೇ, ಕೆಲಸದಲ್ಲಿ ಮೇಲು–ಕೀಳು ಎಂಬುದಿಲ್ಲ. ಯಾವುದೇ ಕೆಲಸವನ್ನು ಒಪ್ಪಿಸಿದಾಗ ಶ್ರದ್ಧೆಯಿಂದ ಮತ್ತು ಅಚ್ಚುಕಟ್ಟಾಗಿ ಮಾಡುವುದನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕು. ಇದೇ ನಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ಈಗ ಹೇಳಿ, ಈ ಯುವಕ ಯಾರೆಂದು ಗೊತ್ತಾಯಿತೇ? ಇವರೇ ಚಿಂತಾಮಣ ಡಿ. ದೇಶಮುಖ. ಇವರ ಪತ್ನಿಯ ಹೆಸರು ದುರ್ಗಾಬಾಯಿ.

■ **ಪ್ರಕಾಶ ಎಸ್. ಮನ್ನಂಗಿ**





## ಕುಂಚ ಪ್ರಪಂಚ

**ಸಮರ್ಥ್ ಜಾಜಿ,** 5ನೇ ತರಗತಿ, ಗುಡ್ ಶಫರ್ಡ್ ಇಂಗ್ಲಿಷ್ ಮೀಡಿಯಂ ಸ್ಕೂಲ್, ಗಂಗಾವತಿ